ಸಂದರ್ಭದಲ್ಲಿ ಮಾಡಲಾಗಿದೆ. ಭೇಟಿಯಾದ ಮತ್ತು ಚರ್ಚೆ ನಡೆಸಿದ ಕಂಪನಿ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

ಸ್ಥಳ	ಕಂಪೆನಿ/ಸಂಸ್ಥೆ	ಉದ್ದೇಶ
ವಾಷಿಂಗ್ಟನ್	ವಿಶ್ವಬ್ಯಾಂಕ್ ಮುಖ್ಯಸ್ಥರೊಂದಿಗೆ	ವಿದ್ಯುತ್ ಯೋಜನೆಗಳ ಕುರಿತು
ವಾಷಿಂಗ್ಟನ್	ನಾರ್ತ್ ಈಸ್ಟ್ ಎನರ್ಜಿ ಸರ್ವೀಸಸ್	ರಾಯಚೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ಚಿಕಾಗೋ ಪವರ್	ಮೈಸೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ವಿಷ್ಕನ್‌ಪವರ್ ಕಂ.	ಯು.ಕೆ.ಪಿ.ಯಲ್ಲಿ ಜಲವಿದ್ಯುತ್ ಯೋಜನೆ
ವಾಷಿಂಗ್ಟನ್	ಹೆಚ್‌ಒಕೆ ಇಂಟರ್ ನ್ಯಾಷನಲ್	ಹೊಸಪೇಟೆ ವಿದ್ಯುತ್ ಯೋಜನೆ
ವಾಷಿಂಗ್ಟನ್	ಹಾರ್ಜ್ ಇಂಜಿನಿಯರಿಂಗ್ ಕಂ.	ಶಿವನಸಮುದ್ರ ವಿದ್ಯುತ್ ಯೋಜನೆ
ವಾಷಿಂಗ್ಟನ್	ಕೋಜೆಂಟ್ರಿಕ್ಸ್	ಮಂಗಳೂರು ವಿದ್ಯುತ್ ಯೋಜನೆ
ವಾಷಿಂಗ್ಟನ್	ರೇಥಿಯಾನ್	ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು
ಕೂಪರ್ಟಿನೊ	ಟ್ಯಾಂಡೆಮ್ ಕಂಪ್ಯೂಟರ್ಸ್	ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ.
ಕೂಪರ್ಟಿನೊ	ನೋವೆಲ್ ಸಾಫ್ಟ್ ವೇರ್ ಕಂ.	ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ
ಕೂಪರ್ಟಿನೊ	ಇಂಟೆಲ್‌ಚಿಪ್ ಮ್ಯಾನು ಫ್ಯಾಕ್ಚರಿಂಗ್ ಕಂ.	- ಅದೇ -
ಕೂಪರ್ಟಿನೊ	ವೆರಿಫೈನ್ ಕಂಪ್ಯೂಟರ್ ಕಂ. ಕಂಪ್ಯೂಟರ್ ಕಂ.	- ಅದೇ -
ಕೂಪರ್ಟಿನೊ	ಹೆವ್ಲೆಟ್ ಪ್ಯಾಕರ್ಡ್ ಕಂಪ್ಯೂಟರ್ ಕಂ.	- ಅದೇ -

ಈ ಎಲ್ಲ ಭೇಟಿಗಳಿಂದ ಉಪಯೋಗ ಆಗಿದೆ ಹಾಗೂ ಮುಂದೆ ಇನ್ನೂ ಹೆಚ್ಚಿನ ಉಪಯೋಗವಾಗುವುದೆಂದು ಭಾವಿಸಲಾಗಿದೆ.

ಪ್ರದೇಶಿ ಸಾರಿಗೆ ಇಲಾಖಾವತಿಯಿಂದ ನೀಡಿದ ಪರ್ಮಿಟ್‌ಗಳು

365 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜೀನಗರ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾದೇಶಿಕ ಸಾರಿಗೆ ಇಲಾಖಾವತಿಯಿಂದ 1993-94ರಲ್ಲಿ ಖಾಸಗಿ ಹಾಗೂ ರಾಷ್ಟ್ರೀಕೃತ ಮಾರ್ಗಗಳಲ್ಲಿ ನೀಡಲಾದ ಪರ್ಮಿಟುಗಳೆಷ್ಟು?

ಅ) ಇದರಿಂದ ಸಾರಿಗೆ ಸಂಸ್ಥೆಗೆ ನಷ್ಟ ಹೆಚ್ಚಿಲ್ಲವೆ, ಮತ್ತು ಅಪಘಾತಗಳು ಹೆಚ್ಚಾಗಿಲ್ಲವೆ.

ಇ) ಈ ನಷ್ಟ ಹಾಗೂ ಅಪಘಾತವನ್ನು ತಪ್ಪಿಸಲು ಸಂಸ್ಥೆಯು ಕೈಗೊಂಡು ದಿಟ್ಟ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1993-94ನೇ ಸಾಲಿನಲ್ಲಿ 591 ರಹದಾರಿಯನ್ನು ಖಾಸಗಿ ಮಾಲೀಕರಿಗೆ ರಾಷ್ಟ್ರೀಕರಣವಲ್ಲದ ಮಾರ್ಗದಲ್ಲಿ ಸಂಚರಿಸಲು ಮತ್ತು 21ರಹದಾರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಖಾಸಗಿ ಹಾಗೂ ರಾಷ್ಟ್ರೀಕರಣ ಮಿಶ್ರ ಮಾರ್ಗದಲ್ಲಿ ಸಂಚರಿಸಲು ನೀಡಲಾಗಿರುತ್ತದೆ. ಯೋಜನೆಯಂತೆ ಸಂಪೂರ್ಣ ರಾಷ್ಟ್ರೀಕರಣ ಮಾರ್ಗಗಳಲ್ಲಿ ಯಾವುದೇ ರಹದಾರಿಯನ್ನು ನೀಡಿರುವುದಿಲ್ಲ.

ಆ) ಖಾಸಗಿ ಮಾಲೀಕರಿಗೆ ರಾಷ್ಟ್ರೀಕರಣವಲ್ಲದ ಮಾರ್ಗದಲ್ಲಿ ರಹದಾರಿಯನ್ನು ನೀಡಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಷ್ಟ ಅನುಭವಿಸುವ ಸಂದರ್ಭವಿರುವುದಿಲ್ಲ. ರಹದಾರಿ ನೀಡಿಕೆಯಿಂದ ಅಪಘಾತಗಳು ಹೆಚ್ಚುತ್ತವೆ ಎಂಬ ಕಾರಣವು ಸರಿಯಲ್ಲ.

ರಾಷ್ಟ್ರೀಕೃತ ಮಾರ್ಗಗಳಲ್ಲಿ ಅನಧಿಕೃತವಾಗಿ ಓಡಾಡುವ ಮ್ಯಾಕ್ಸಿಕ್ಯಾಬ್‌ಗಳು ಮತ್ತು ಟೂರಿಸ್ಟ್ ಬಸ್ಸುಗಳಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನಷ್ಟ ಉಂಟಾಗುತ್ತಿದೆ. ಇವುಗಳ ಕಳ್ಳಾಟಿಕೆ ಓಡಾಟವನ್ನು ತಡೆಗಟ್ಟಲು ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ತೆಗೆದು ಕೊಂಡಿರುವ ಮುಖ್ಯ ಕ್ರಮಗಳು ಈ ಕೆಳಗಿನಂತಿದೆ.

1) ಅಜಾಗುರೂಕತೆ ಮತ್ತು ಅತಿವೇಗದಿಂದ ವಾಹನ ಚಾಲನೆ ಮಾಡಿ,ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿ ಮರಣಾಂತರ ಹಾಗು ದೊಡ್ಡ ಪ್ರಮಾಣದ ಅಪಘಾತಗಳಿಗೆ ಕಾರಣರಾದ ಚಾಲಕರನ್ನು ಸೇವೆಯಿಂದ ವಜಾ ಮಾಡುವುದನ್ನು ಒಳಗೊಂಡಂತೆ ಸೂಕ್ತ ಶಿಸ್ತಿನ ಕ್ರಮ ಜರುಗಿಸುವುದಲ್ಲದೆ ಅಪಘಾತಕ್ಕೆ ಕಾರಣರಾದ ಚಾಲಕರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಲ್ಲಿಡುವುದಾಗಿದೆ.

2) ಚಾಲಕರುಗಳಿಗೆ ಕರ್ತವ್ಯದ ಮೇಲಿದ್ದಾಗ ಉತ್ತಮ ನಡುವಳಿಕೆ ಹಾಗೂ ಸಂಚಾರ ನಿಯಮಗಳ ಬಗ್ಗೆ ತರಬೇತಿ ನೀಡಲಾಗುವುದು.

3) ಚಾಲಕರ ನೇಮಕಾತಿ ವಿಧಾನವನ್ನು ಸಂಕೀರ್ಣಗೊಳಿಸಲಾಗಿದೆ.

4) ಚಾಲಕರ ನೇಮಕಾತಿಗೆ ನಿಗದಿಪಡಿಸಿಲಾಗಿದ್ದು ಕನಿಷ್ಟ ವಯೋಮಿತಿಯನ್ನು 21 ವರ್ಷದಿಂದ 24 ವರ್ಷಗಳಿಗೆ ಹೆಚ್ಚಿಸಲಾಗಿದೆ.

5) 20ವರ್ಷ ಮತ್ತು 5ವರ್ಷಗಳ ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರುಗಳಿಗೆ ಕ್ರಮವಾಗಿ, ಮುಖ್ಯ ಮಂತ್ರಿಯವರ ಚಿನ್ನದ ಪದಕ ಮತ್ತು ಬೆಳ್ಳಿ ಪದಕವನ್ನು ನೀಡಲಾಗುತ್ತಿದೆ. ಬೆಂಗಳೂರು ನಗರ ಸಾರಿಗೆ ಚಾಲಕರುಗಳಿಗೆ ಈ ಅವಧಿಯನ್ನು ಕ್ರಮವಾಗಿ 7 ವರ್ಷ ಮತ್ತು 3 ವರ್ಷಗಳಿಗೆ ಇಳಿಸಲಾಗಿದೆ.

ಈ ಮೇಲಿನ ಕ್ರಮಗಳಿಂದಾಗಿ ಪ್ರತಿ ಲಕ್ಷ ಕಿ.ಮೀ.ಗಳಿಗೆ ಉಂಟಾಗುತ್ತಿರುವ ಅಪಘಾತದ ದರ ರಾಷ್ಟ್ರದ ಇತರ ದೊಡ್ಡ ಸಾರಿಗೆ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ,ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಡಿಮೆ ಇರುತ್ತದೆ.